# ಪ್ರಾಚೀನರ ದೃಷ್ಟಿಯಲ್ಲಿ ಭಾಷೆ

ಡಾ. ಪಾಂಡುರಂಗ ವಿಠಲ

ವೈದಿಕ ಪರಂಪರೆಯಲ್ಲಿ ಶಬ್ದಕ್ಕೆ ಹಾಗೂ ಭಾಷೆಗೆ ಗಹನವಾದ ಆಧ್ಯಾತ್ಮಿಕ, ತಾತ್ತ್ವಿಕ ಅರ್ಥವಿದೆ. ಇದರ ವಿವಿಧ ಆಯಾಮಗಳನ್ನು ಕುರಿತು ಇಲ್ಲಿ ಬರೆದಿರುವ ಲೇಖಕರು ಮೈಸೂರಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಒಳ್ಳೆಯ ಚಿಂತಕರೂ, ಬರಹಗಾರರೂ ಆಗಿರುವ ಇವರ ಅನೇಕ ಬರಹಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

**ಮಾ**ತು ಮೊದಲು, ಬರಹ ಈಚಿನದು. ಹೀಗಾಗಿ, ಭಾಷೆ ಎಂದರೆ ಮಾತೇ. ಮಾತೇ ಎಲ್ಲ ಜ್ಞಾನಗಳ ಮೂಲ. ಇದು ಶಕ್ತಿ ಕೂಡ. ವಾಕ್ ಶಕ್ತಿ, ವಾಕ್ ಸಿದ್ಧಿ ಇತ್ಯಾದಿ ಪದಗಳು ಬಳಕೆಯಲ್ಲಿವೆ. ಬರಹವೂ ಗಾಳಿಗೆ ತೂರಿಹೋಗದಂತೆ ಘನೀಕರಿಸಿದ ಮಾತೇ. ಬರಹದಲ್ಲಿ ಕೇಳುವಿಕೆ ಕಣ್ಣಿನಿಂದ; ಬ್ರೇಲ್ ಲಿಪಿಯಾದರೆ ಸ್ಪರ್ಶದಿಂದ. ಮಾತು ಸಂವಾದ ರೂಪದ್ದು. ಪ್ರತಿಕ್ರಿಯೆಯಿಂದ ಅದಕ್ಕೊಂದು ಅರ್ಥ. ಪ್ರಾಚೀನರ ಗ್ರಂಥಗಳೆಲ್ಲ ಸಂವಾದ ರೂಪದಲ್ಲೆ ಇರುವುದನ್ನು ಗಮನಿಸಬಹುದು. ಒಬ್ಬನೇ ಯೋಚಿಸುವಾಗಲೂ, ಭಾವಿಸುವಾಗಲೂ ಅಂತರಂಗವೇ ಎರಡಾಗಿ, ಸಂವಾದಿಸುತ್ತದೆ; ಸಂವಾದದಿಂದ ಕಲ್ಪನೆ ಬೆಳೆಯುತ್ತದೆ. ಮಾನವನ ವಿಕಾಸಕ್ಕೆ ಭಾಷೆಯ ಶಕ್ತಿಯ ಕೊಡುಗೆ ಹೆಚ್ಚು.

ವಾಕ್ ಶಕ್ತಿಯ ನಾಲ್ಕು ಪರಿಮಿತಿಗಳನ್ನು ಋಗ್ವೇದದಲ್ಲಿ ಹೇಳಿದೆ:

ಚತ್ವಾರಿ ವಾಕ್ ಪರಿಮಿತಾ ಪದಾನಿ ।
ತಾನಿ ವಿದುರ್ ಬ್ರಾಹ್ಮಣಾ ಯೇ ಮನೀಷಿಣಃ ॥
ಗುಹಾ ತ್ರೀಣಿ ನಿಹಿತಾ ನೇಂಗಯನ್ತಿ ।
ತುರೀಯಂ ವಾಚೋ ಮನುಷ್ಯಾ ವದಂತಿ॥ *(೧.೧೬೪.೪೫)*

ಮನೀಷಿಗಳಿಗೆ ತಿಳಿದ **ಪರಾ, ಪಶ್ಯಂತೀ, ಮಧ್ಯಮಾ, ವೈಖರೀ** – ಈ ನಾಲ್ಕು ವಾಕ್ಕಿನ ಪರಿಮಿತಿಗಳು. ಮೊದಲ ಮೂರು ಅಂತರಂಗದಲ್ಲಿ ಅಡಗಿದ್ದು, ನಾಲ್ಕನೆಯದು ಎಲ್ಲರ ವ್ಯವಹಾರದಲ್ಲಿ ಬಳಕೆಯಲ್ಲಿದೆ. ಮನುಷ್ಯರು ಕೇವಲ ನಾಲ್ಕನೇ ಹಂತದ ವೈಖರೀ ಮಾತನ್ನು ಉಪಯೋಗಿಸುತ್ತಾರೆ. ನಾವು ಮಾತನಾಡುವ ಭಾಷೆ ವೈಖರೀ. ಇದು ಮಾತಿನ ಅತ್ಯಂತ ಸ್ಪಷ್ಟ ರೂಪವಾಗಿದೆ, ನಾವೆಲ್ಲರೂ ಪ್ರತಿದಿನ ಕೇಳುವ ಮತ್ತು ಬಳಸುವ ಪ್ರಕಾರವಾದ ಇದು ಕ್ರಿಯಾಶಕ್ತಿಯ ಅಭಿವ್ಯಕ್ತಿ, ಕ್ರಿಯೆಯ ಶಕ್ತಿ.

ಅಹಂಕಾರ, ಬುದ್ಧಿ, ಮನಸ್ಸು, ಚಿತ್ತ ಎಂಬ ನಾಲ್ಕು ಅಂತಃಕರಣಗಳು ಒಂದಾಗಿದ್ದು, ವಾಕ್ ಅನ್ನು ಪೂರ್ಣವಾಗಿ ಕೇಳಿ ಅರಿತುಕೊಳ್ಳಬಲ್ಲ ಮನೀಷಿಯೆ ಶ್ರೋತ್ರಿಯ. ಮನಸ್ಸು ಮತ್ತು ವಾಕ್ಕು ಒಂದರೊಳಗೊಂದು ಸೇರಿದ್ದು, ಒಂದರಿಂದ ಇನ್ನೊಂದನ್ನು ತಿಳಿಯಬಹುದು.

ಧ್ವನಿಯು ಮೊದಲು ಮೂಲಾಧಾರದಲ್ಲಿ ಪರಾ ವಾಣಿಯಾಗಿ, ನಂತರ ಮಣಿಪೂರದಲ್ಲಿ ಪಶ್ಯಂತೀಯಾಗಿ, ಮುಂದೆ ಅನಾಹತದಲ್ಲಿ ಮಧ್ಯಮಾ ಆಗಿ, ಅನಂತರ ವಿಶುದ್ಧದಲ್ಲಿ ವೈಖರೀಯಾಗಿ ಹೊರಹೊಮ್ಮುತ್ತದೆ. ಶಾರೀರಿಕ ದೃಷ್ಟಿಕೋನದಿಂದ, ವೈಖರೀ ಎಂಬುದು ಬಾಯಿಯಿಂದ, ನಾಲಿಗೆಯ ಮೂಲಕ ಕಾರ್ಯನಿರ್ವಹಿಸುವ ಮಾತು. ಮಧ್ಯಮಾ ಮೂಗಿನ ಮೂಲಕ, ಉಸಿರಾಟದ ಮೂಲಕ ಜಗತ್ತಿನಲ್ಲಿ ಹೊರಹೊಮ್ಮುತ್ತದೆ. ಪಶ್ಯಂತೀಯನ್ನು ಕಣ್ಣುಗಳಿಂದ ಹೇಳಲಾಗುತ್ತದೆ. ಪರಾ ಆಧ್ಯಾತ್ಮಿಕ ಆಗಿದ್ದು, ಇದು ನೇರವಾಗಿ ಅರಿವಿನ ಗುರುವಿನಿಂದ ಕಾರ್ಯರೂಪಕ್ಕೆ ಬರುತ್ತದೆ.

ವಾಕ್ಕಿನ ಪರಾ, ಪಶ್ಯಂತೀ, ಮಧ್ಯಮಾ ಮತ್ತು ವೈಖರೀಯ ಕ್ರಮಶಃ ಹಂತಗಳನ್ನು ಶ್ರೀಮದ್ಭಾಗವತ ಪುರಾಣದಲ್ಲಿ ಈ ಕೆಳಗಿನಂತೆ ವಿವರಿಸಲಾಗಿದೆ : *(೧೧.೧೨.೧೭)*

ಸ ಏಷ ಜೀವೋ ವಿವರಪ್ರಸೂತಿಃ
ಪ್ರಾಣೇನ ಘೋಷೇಣ ಗುಹಾಂ ಪ್ರವಿಷ್ಟಃ ।
ಮನೋಮಯಂ ಸೂಕ್ಷ್ಮಮುಪೇತ್ಯ ರೂಪಂ
ಮಾತ್ರಾಸ್ವರೋವರ್ಣ ಇತಿ ಸ್ಥವಿಷ್ಠ: ॥

ಗ್ರಹಿಕೆಗೆ ನಿಲುಕುವ ಪರಮಾತ್ಮನೇ ಎಲ್ಲದರಲ್ಲಿಯೂ ಜೀವ ತುಂಬಿ, ಮೂಲಾಧಾರ ಮೊದಲಾದ ಚಕ್ರಗಳು (ನರಕೇಂದ್ರಗಳು ಅಥವಾ ಪ್ಲೆಕ್ಸಸ್) ಮತ್ತು (ಮಾನವ ದೇಹದ ಆಂತರಿಕ ಭಾಗಗಳಲ್ಲಿ ಅಸ್ತಿತ್ವದಲ್ಲಿರುವ) ಇತರವುಗಳಲ್ಲಿ ತನ್ನನ್ನು ತಾನು ತೋರಿಸಿಕೊಳ್ಳುತ್ತಾನೆ. ಅವನು ಗುಹೆಯನ್ನು (ಗುದದ್ವಾರದ ಬಳಿ ಇರುವ ಮೂಲಾಧಾರ ಚಕ್ರವನ್ನು) ನಾದದಿಂದ ತುಂಬಿದ ಪ್ರಾಣದೊಂದಿಗೆ ಪ್ರವೇಶಿಸುತ್ತಾನೆ. ಈ ನಾದವೇ ಪರಾ ವಾಕ್ ಎಂದು ಕರೆಯಲಾಗುವ, ಆ ವಾಣಿ. ಅವನು ಕ್ರಮವಾಗಿ ಹೊಕ್ಕಳು ಮತ್ತು ಗಂಟಲಿನಲ್ಲಿ ನೆಲೆಗೊಂಡಿರುವ ಮಣಿಪೂರ ಮತ್ತು ವಿಶುದ್ಧ ಎಂಬ ಆಧ್ಯಾತ್ಮಿಕ ಚಕ್ರಗಳಲ್ಲಿ ನೆಲೆಯಾದ ಪಶ್ಯಂತೀ ಮತ್ತು ಮಧ್ಯಮಾ ಮಾತಿನ ಪ್ರಕಾರಗಳ ಸೂಕ್ಷ್ಮವಾದ ಮಾನಸಿಕ ರೂಪವನ್ನು ತಾಳಿ ಮುಂದುವರಿಯುತ್ತಾನೆ. ಬಾಯಿಯಲ್ಲಿ ಹ್ರಸ್ವ, ದೀರ್ಘ ಸ್ವರಗಳ (ಉದಾತ್ತ, ಅನುದಾತ್ತ ಮತ್ತು ಸ್ವರಿತ),

ಮತ್ತು ವರ್ಗೀಯ ಅವರ್ಗೀಯ ವ್ಯಂಜನಗಳ ಉಚ್ಚಾರಣೆಗಳಲ್ಲಿ ಅವನು ತನ್ನನ್ನು ತೋರಿಸಿಕೊಳ್ಳುತ್ತಾನೆ. ಇದು ವೇದಗಳು ಮತ್ತು ಅದರ ಶಾಖೆಗಳಲ್ಲಿ ವಿವರಿಸಲ್ಪಟ್ಟ ಅತ್ಯಂತ ಸ್ಥೂಲವಾದ ವಾಕ್-ರೂಪವಾಗಿದೆ (ವೈಖರೀ ಎಂದು ಕರೆಯಲ್ಪಡುತ್ತದೆ).

ಈ ನಾಲ್ಕು ಹಂತಗಳ ವಾಕ್ಕುಗಳ ವಿವರವನ್ನು ನೋಡೋಣ:

**ಪರಾ:** ಇದನ್ನು ತಲ್ಲೀನತೆಯ ಮಹಾ ಮೌನದ ಭಾಷೆ ಎನ್ನಬಹುದು. ಉಳಿದೆಲ್ಲ ಭಾಷೆಗಳ ಮೂಲ ಬೀಜ ಇದು. ಇದನ್ನೇ ವಾಕ್ ಶಕ್ತಿ ಎನ್ನುವುದು. ಅಂತಃಕರಣದ ಚಿತ್‌ನಲ್ಲಿ ಇದರ ಕಾರ್ಯ. ವಾಕ್ಕಿನ ಆಯಾಮಗಳಲ್ಲಿ ಪರಾ ಅತ್ಯುನ್ನತವಾದ ಶಾಶ್ವತ ಶಬ್ದವಾಗಿದ್ದು, ಆಕಾಶದಲ್ಲಿ ಇರುತ್ತದೆ. ಹಿಂದೂ ಧರ್ಮದಲ್ಲಿ ಇದನ್ನು ಶಬ್ದಬ್ರಹ್ಮ ಅಥವಾ ನಾದಬ್ರಹ್ಮ ಎಂದು ಹೇಳುತ್ತಾರೆ. ಪರಾ ವಾಣಿಯು ದೈವಿಕವಾಗಿದ್ದು ಅದನ್ನು ಮನಸ್ಸಿನ ಶೂನ್ಯತಾ ಸ್ಥಿತಿಯಲ್ಲಿ ಕೇಳಬಹುದು.

ಮೂಲಾಧಾರ ಚಕ್ರವು ಈ ಪರಾ ರೂಪದ ವಾಕ್ಕಿನ ಸ್ಥಾನವಾಗಿದ್ದು ಇಲ್ಲಿ ಹುಟ್ಟಿ ಅದು ಹೃದಯವನ್ನು ತಲುಪುತ್ತದೆ. ಭರ್ತೃಹರಿಯು ತನ್ನ 'ವಾಕ್ಯಪದೀಯ'ದಲ್ಲಿ ಇದನ್ನು ಹೀಗೆ ವಿವರಿಸಿದ್ದಾನೆ:

**ವಿಶೇಷ ರಹಿತಾ ಚೇತನ ಮಿಶ್ರಾ ಸೃಷ್ಟ್ಯುಪಯೋಗಿನೀ ಜಗದುಪಾದಾನಭೂತಾ ।**

**ಕುಂಡಲಿನೀ ರೂಪೇಣ ಪ್ರಾಣಿನಾಂ ಮೂಲಾಧಾರೇ ವರ್ತತೇ ವರ್ಣಾದಿ ।**

ಮೂಲಾಧಾರ ಚಕ್ರದಲ್ಲಿ ಪ್ರಜ್ಞೆಯೊಂದಿಗೆ, ಪ್ರಾಣವಾಯುವಿನ ಜೊತೆ ಕುಂಡಲಿನೀ ರೂಪದಲ್ಲಿ ಯಾವುದೇ ವಿಶೇಷತೆ ಇಲ್ಲದೆ ನೆಲೆಸಿದ ಇದನ್ನು ಪರಾ ಎಂದು ಕರೆಯಲಾಗುತ್ತದೆ.

**ಕುಂಡಲಿನ್ಯಾಃ ಪ್ರಾಣವಾಯು ಸಂಯೋಗೇ ಪರಾ ವ್ಯಜ್ಯತೇ ।**

ಕುಂಡಲಿನಿಯೊಂದಿಗೆ ಪ್ರಾಣ-ವಾಯುವಿನ ಸಂಯೋಗದೊಡನೆ ವಾಕ್ಕಿನ ಪರಾ ರೂಪವು ರಚನೆಯಾಗಿ ತನ್ನ ಪ್ರಯಾಣವನ್ನು ಪ್ರಾರಂಭಿಸುತ್ತದೆ. ಮೊದಲ ಉಸಿರು ನಮ್ಮೊಳಗಿನ ಜಾಗೃತ ಶಕ್ತಿಯಾದ ಕುಂಡಲಿನೀ ಶಕ್ತಿಯೊಂದಿಗೆ ಬೆರೆತು, ಉಸಿರಾಟ ಪ್ರಾರಂಭವಾಗುತ್ತದೆ. ಇದನ್ನು ನಾವು ಚೇತನ ಶಕ್ತಿ ಎಂದೂ ಕರೆಯಬಹುದು. ಪರಾ ವಾಕ್ಕು ಕರಗತವಾಗಲು ಇಷ್ಟಸಿದ್ಧಿ ಆಗಬೇಕು ಎನ್ನುತ್ತಾರೆ.

**ಪಶ್ಯಂತೀ:** ಆಳವಾದ ಧ್ಯಾನದಲ್ಲಿ ಮಂತ್ರದರ್ಶನವಾಗುವಂತೆ ಇರುವ ಇದನ್ನು ಸತ್ಯದ ಹೊಳಹು ಎನ್ನಬಹುದು. (Insight, intuition). ತೀವ್ರ ಹಂಬಲದ ಸಂಶೋಧಕರಿಗೆ ಅಪ್ರಜ್ಞೆಯಲ್ಲಿ ಇದರ ವರದಿಂದ ಸಮಸ್ಯೆ ಪರಿಹಾರವಾಗಿ, ಸತ್ಯದ ಬೆಳಕು ಕಾಣುತ್ತದೆ. ನಾಭಿ ಮತ್ತು ನೇತ್ರಗಳಲ್ಲಿ ಇದರ ಕಾರ್ಯ. ಮೊದಲ ಹಂತದ ಅನಂತರ ಪರಾ ವಾಕ್ಕು ಮುಂದುವರಿದು ಹೃದಯಕ್ಕೆ ಬಂದಾಗ ಪಶ್ಯಂತೀ ಎಂದು ಕರೆಯಲಾಗುತ್ತದೆ. ಮಣಿಪೂರ ಚಕ್ರವು ಈ ವಾಣಿಯ ಸ್ಥಾನವಾಗಿದೆ. ಇನ್ನೊಂದು ರೀತಿಯಲ್ಲಿಹೇಳುವುದಾದರೆ, ಹೃದಯದಲ್ಲಿ ಪಿಸುಗುಟ್ಟುವ ವಾಣಿಯನ್ನು ಪಶ್ಯಂತೀ ಎಂದು ಕರೆಯಲಾಗುತ್ತದೆ.

ಪ್ರಾಚೀನ ಋಷಿಗಳು ಈ ವಾಕ್ಕಿನ ಮೂಲಕ ಶಾಪಾನುಗ್ರಹಗಳನ್ನು ನೀಡುತ್ತಿದ್ದರು ಎನ್ನಲಾಗಿದೆ.

**ಮಧ್ಯಮಾ:** ಪೂಜೆಯ ಭಾವನೆ-ಅಂತರಂಗದೊಳಕ್ಕೆ ಇಳುಕುವ ಧ್ಯಾನಕ್ಕೆ ನಿಲುಕುವ ಈ ಆಸ್ತಿಕತೆಯ ಭಾಷೆಯು ಧಾರ್ಮಿಕರಲ್ಲಿ ಹಲವರಿಗೆ ಅನುಭವಕ್ಕೆ ಬರುತ್ತದೆ. ಮೂಗು ಮತ್ತು ಹೃದಯ ಇದರ ಕ್ಷೇತ್ರ. ವಾಕ್ಕಿನ ಮುಂದಿನ ಮಧ್ಯಂತರ ಹಂತವೇ ಮಧ್ಯಮಾ. ಇದು ಕೆಲವು ಪರಿಗಣನೆಯ ಅನಂತರ ಚಿಂತನಶೀಲವಾಗಿ ಬರುವ ಮಾತು.

ಇದನ್ನು ಚಿಂತನೆಯ ರೂಪದಲ್ಲಿ ಸಕ್ರಿಯವಾಗಿರುವ ವಾಣಿ ಎಂದು ವಿವರಿಸಬಹುದು. ಮಧ್ಯಮಾವು ನಮ್ಮ ಮನಸ್ಸಿನಲ್ಲಿ ಮತ್ತು ಬುದ್ಧಿಯಲ್ಲಿ ನೆಲೆಸಿದೆ. ಈ ವಾಕ್ಕಿನ ಆಸನವು ಅನಾಹತ ಚಕ್ರ ಎಂದು ಹೇಳಲಾಗಿದೆ. ಪಶ್ಯಂತೀ ವಾಕ್ಕು ಅನಂತರ ಆಂತರಿಕ (ಅಂತಸ್ಥಂ ನಿವೇಶಿನೀ), ಸೂಕ್ಷ್ಮ ಬೌದ್ಧಿಕ ಪ್ರಕ್ರಿಯೆ (ಜ್ಞಾನ), ಚಿಂತನೆಯ ಮಟ್ಟ (ಬುದ್ಧಿ-ಮಾತ್ರೋಪಾದಾನ) ಆಗಿ ರೂಪಾಂತರಗೊಳ್ಳುತ್ತದೆ. ಈ ಸಮಯದಲ್ಲಿ ಮಾತನಾಡುವವನಿಗೆ ಪದವು ಉದ್ಭವಿಸಿದೊಡನೆ (ಪರಿಗೃಹೀತ) ಅರಿವಾಗುತ್ತದೆ ಮತ್ತು ಅದು ಅವನೊಳಗೆ ಒಂದು ರೂಪವನ್ನು ಪಡೆಯುತ್ತದೆ.

ಆಲೋಚನೆಗಳ ಅನುಕ್ರಮವು ನಮ್ಮೊಳಗೆ ಪದಗಳ ಒಂದು ನಿರ್ದಿಷ್ಟ ಮತ್ತು ಸ್ಪಷ್ಟ ಶ್ರೇಣಿಯನ್ನು ಉಂಟುಮಾಡುತ್ತದೆ. ಇದು ಮಧ್ಯಮಾ ವಾಕ್ ಎಂಬ ಮಧ್ಯಂತರ ಹಂತ. ಇದು ಒಂದು ಅನುಕ್ರಮ ಇರುವ ಆದರೆ ವಾಚ್ಯವಾಗುವುದಕ್ಕಿಂತ ಹಿಂದಿರುವ ಚಿಂತನೆ – ಇದನ್ನು ಮೌನದ ಧ್ವನಿ ಎಂದು ವಿವರಿಸಲಾಗಿದೆ. ಹೀಗೆ ಮಧ್ಯಮಾ ವಾಕ್ಕು ಕೇಳಿಸದ ಅಲೆ ಅಥವಾ ಸ್ಪಂದನದ ರೂಪ.

**ವೈಖರೀ:** ವ್ಯವಹಾರದ ಭಾಷೆ ಮಾತ್ರವಾಗಿರುವ ವೈಖರೀಯೊಂದನ್ನೇ, ಬಾಯಿಯೊಂದನ್ನೇ ವಿಜ್ಞಾನಿಗಳು ನಂಬುತ್ತಾರೆ. ಗೂಢವಾಗಿರುವ ಇತರವುಗಳನ್ನು ಪರಿಗಣಿಸುವುದಿಲ್ಲ. ಇದು ದೈನಂದಿನ ಮಾತನಾಡುವ ಭಾಷೆಯಾಗಿ ಉತ್ತಮವಾಗಿ ವಿವರಿಸಲ್ಪಟ್ಟಿದೆ. ಇದಕ್ಕೆ ಹೆಚ್ಚು ಚಿಂತನೆಯ ಅಗತ್ಯವಿಲ್ಲ. ಮಾತಿನ ಸಾಮರ್ಥ್ಯ ಇದು. ವೈಖರೀಯ ರೂಪಗಳು ಸ್ಪಷ್ಟವಾಗಿದ್ದು, ವ್ಯಾಖ್ಯಾನದ ಪ್ರಕಾರ ವಾಕ್ಕಿನ ಅತ್ಯಂತ ಕೆಳಹಂತಕ್ಕೆ ಸೇರಿದೆ.

ವೈಖರೀ ಮಾತಿನ ರೂಪಗಳು ವ್ಯಾಕರಣದಲ್ಲಿ ಮಾತ್ರೆಗಳು, ಹ್ರಸ್ವ-ದೀರ್ಘ ಸ್ವರಗಳು, ಕಂಠ್ಯ, ತಾಲವ್ಯ, ಮೂರ್ಧನ್ಯ, ದಂತ್ಯ ಇತ್ಯಾದಿ ವ್ಯಂಜನಗಳು ಅಂದರೆ ವರ್ಣಗಳನ್ನು (ಮಾತ್ರಾ, ಸ್ವರ, ವರ್ಣ) ಹೊಂದಿವೆ... ಪರಾ, ಪಶ್ಯಂತೀ, ಮಧ್ಯಮಾಗಳಂತಲ್ಲದೆ ಈ ವೈಖರೀ ವಾಕ್ಕನ್ನು ಇತರ ಜನರು ಕೇಳಬಹುದು. ಪ್ರಕೃತಿ ಮತ್ತು ಪರಮಾತ್ಮ ಎರಡೂ ವೈಖರೀಯ ಮೂಲಕ ಅಭಿವ್ಯಕ್ತವಾಗುತ್ತದೆ ಎಂದು ಹೇಳಲಾಗುತ್ತದೆ. ವೈಖರೀಯು ವಾಕ್‌ಅನ್ನು ಸೂಕ್ಷ್ಮದಿಂದ ಸ್ಥೂಲರೂಪಕ್ಕೆ ಪೂರ್ಣವಾಗಿ ಪರಿವರ್ತಿಸುತ್ತದೆ.

ಎಲ್ಲಾ ವೈಖರೀ ಶಬ್ದಗಳನ್ನು ಬ್ರಹ್ಮನಾದ ಎಂದು ಪರಿಗಣಿಸುತ್ತಾರೆ.

ಇನ್ನು ಪರಾತ್ಪರಾ. ಅವ್ಯಕ್ತಕ್ಕೆ, ಅನಂತಕ್ಕೆ ಅಂಟಿರುವ ಇದು ಸಮಾಧಿಯಲ್ಲಿ ಅನುಭವಕ್ಕೆ ಬರುತ್ತದೆ ಎನ್ನುತ್ತಾರೆ. ದೇವ-ಮಾನವರ ನಡುವಿನ ಮಾತು ಇದು (Illumination). **'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಃ।'**

**'ಏಕಂ ಸತ್; ವಿಪ್ರಾ ಬಹುಧಾ ವದಂತಿ'**. ಪ್ರವಾದಿಗಳು ತಾವು ಕಂಡ ಸತ್ಯವನ್ನು ತಮ್ಮ ಪರಿಭಾಷೆಯಲ್ಲಿ ಹೇಳಿದ್ದನ್ನು ಅನುಯಾಯಿಗಳು ವಿಧವಿಧವಾಗಿ ಅರ್ಥೈಸಿ, ಭ್ರಮೆಗಳಿಗೆ ಒಳಗಾಗಿ, ತಮ್ಮದೇ ಸತ್ಯವೆಂದು ಹೋರಾಡಿ, ರಕ್ತದ ಪ್ರವಾಹವನ್ನೇ ಹರಿಸಿದರು.

ಜೀವನಾಡಿ ಅಥವಾ ಎಲ್ಲ ಚಕ್ರಗಳನ್ನು ಸೇರಿಸುವ ವೀಣಾದಂಡ ಸುಷುಮ್ನಾ. ಸುಷುಪ್ತವಾಗಿರುವ ಅಲ್ಲಿನ ಪ್ರಾಣಶಕ್ತಿಯನ್ನು ವೈದಿಕ ವಾಕ್ ಶಕ್ತಿ ಎಚ್ಚರಿಸುತ್ತದೆ. ವಿವೇಕ ಜ್ಞಾನವನ್ನು, ವಿಮರ್ಶಾ ಶಕ್ತಿಯನ್ನು ನೀಡುತ್ತದೆ.

ಯೋಗ-ಕುಂಡಲಿನೀ ಉಪನಿಷತ್‌ನಲ್ಲಿ ವಾಕ್‌ನ ರೂಪಾಂತರವನ್ನು ಉಲ್ಲೇಖಿಸುವ ಶ್ಲೋಕವಿದೆ. *(ಶ.೧೮-೧೯)*

**ಪರಾಯಮಂಕುರೀಭೂಯ ಪಶ್ಯನ್ತ್ಯಾಂ ದ್ವಿದಲೀಕೃತಾ ।**
**ಮಧ್ಯಮಾಯಾಂ ಮುಕುಲಿತಾ ವೈಖರ್ಯಾ ವಿಕಾಸ ಕೃತಾ।**
**ಪೂರ್ವ ಯಥೋದಿತಾ ವಾಗ್ವಿಲೋಮೇನಾಸ್ತಗಾ ಭವೇತ್॥**

ಪರಾದಲ್ಲಿ ಮೊಳಕೆಯೊಡೆಯುವ ಆ ವಾಕ್ಕು (ಮಾತಿನ ಶಕ್ತಿ), ಪಶ್ಯಂತೀಯಲ್ಲಿ ಎರಡು ಎಲೆಗಳನ್ನು ನೀಡುತ್ತದೆ: ಮಧ್ಯಮಾದಲ್ಲಿ ಮೊಗ್ಗು ಆಗುತ್ತದೆ ಮತ್ತು ವೈಖರೀಯಲ್ಲಿ ಅರಳುತ್ತದೆ - ಈ ಹಿಂದೆ ವಿವರಿಸಿದ ವಾಕ್ಕು ಶಬ್ದವನ್ನು ಹೀರಿಕೊಳ್ಳುವ ಹಂತವನ್ನು ತಲುಪುತ್ತದೆ ಮತ್ತು ವಿಲೋಮ ಕ್ರಮದಿಂದ (ಅಂದರೆ ವೈಖರೀಯಿಂದ ಪ್ರಾರಂಭಿಸಿ, ಇತ್ಯಾದಿ) ಪರಾದೆಡೆ ಹೊರಳುತ್ತದೆ.

ವಾಕ್ಕಿನ ಬಗ್ಗೆ ಮುಂದಿನ ಆಸಕ್ತಿದಾಯಕ ಶ್ಲೋಕ (೨೦) ಇಲ್ಲಿದೆ. ಆವಾಕ್‌ನ ಮಹಾನ್ ಅಧಿಪತಿಯೂ, ಭೇದವಿಲ್ಲದವನೂ ಮತ್ತು ಆವಾಕ್‌ಗೆ ಪ್ರಕಾಶಕನೂ ಆದವನು ಆತ್ಮ ಎಂದು ಭಾವಿಸುವವನು; ಯಾರು ಹೀಗೆ ಯೋಚಿಸುತ್ತಾರೋ, ಅವರು ಉಚ್ಚ ಅಥವಾ ಕೀಳು (ಅಥವಾ ಒಳ್ಳೆಯ ಅಥವಾ ಕೆಟ್ಟ) ಪದಗಳಿಂದ ಎಂದಿಗೂ ಪ್ರಭಾವಿತರಾಗುವುದಿಲ್ಲ.

ವೇದಗಳು ಈಶ್ವರನ ಧ್ವನಿ-ಅಭಿವ್ಯಕ್ತಿಯನ್ನು ರೂಪಿಸುತ್ತವೆ. ಆ ಶಬ್ದವು ನಾಲ್ಕು ವಿಭಾಗಗಳನ್ನು ಹೊಂದಿದೆ - ಪ್ರಾಣದಲ್ಲಿ ಮಾತ್ರ ಅಭಿವ್ಯಕ್ತಿಯನ್ನು ಕಂಡುಕೊಳ್ಳುವ ಪರಾ, ಮನಸ್ಸಿನಲ್ಲಿ ಅಭಿವ್ಯಕ್ತಿಯನ್ನು ಕಂಡುಕೊಳ್ಳುವ ಪಶ್ಯಂತೀ, ಇಂದ್ರಿಯಗಳಲ್ಲಿ ಅಭಿವ್ಯಕ್ತಿಯನ್ನು ಕಂಡುಕೊಳ್ಳುವ ಮಧ್ಯಮಾ ಮತ್ತು ಸ್ಪಷ್ಟವಾದ ಉಚ್ಚಾರದಲ್ಲಿ ಅಭಿವ್ಯಕ್ತಿಯನ್ನು ಕಂಡುಕೊಳ್ಳುವ ವೈಖರೀ.

ಶಬ್ದಬ್ರಹ್ಮವು ಪರಾ ಸ್ಥಿತಿಯಲ್ಲಿ ಚಲನೆಯಿಲ್ಲದೆ ಮಹಾಬಿಂದುವಾಗಿ ಕುಂಡಲಿನೀ ಶಕ್ತಿರೂಪವಾಗಿ ಇದ್ದರೆ, ಪಶ್ಯಂತೀ ಸ್ಥಿತಿಯಲ್ಲಿ ಮೂಲಾಧಾರದಿಂದ ಮಣಿಪೂರದವರೆಗಿನ ಸಾಧಾರಣ ಚಲನೆಯಾಗಿ ತೋರುವುದು. ಮಧ್ಯಮಾದಲ್ಲಿ ಸೂಕ್ಷ್ಮವಾಗಿ ನಾಮರೂಪಗಳು ಗೋಚರಿಸಿ, ಜ್ಞಾತೃ-ಜ್ಞೇಯ ಸ್ಥಿತಿಯ ಅರಿವಾಗುವುದು ಹಾಗೂ ಈ ಮಧ್ಯಮಾ ಶಬ್ದವು ವೈಖರೀಯಲ್ಲಿ ಸ್ಥೂಲವಾಗಿ ಕಂಠದ ಮೂಲಕ ಉಚ್ಚರಿಸಲ್ಪಡುವ ಮಾತು ಆಗಿ, ಇದನ್ನು 'ವಿರಾಟ್ ಶಬ್ದ' ಎನ್ನುವರು. ಸೃಷ್ಟಿಯಲ್ಲಿ ಬಾಹ್ಯ ಅರ್ಥವಿಲ್ಲದ ಅಂತಸ್ಥ ಮಧ್ಯಮಾ ಶಬ್ದಾರ್ಥಗಳು ಒಂದಾಗಿರುವ ಸೂಕ್ಷ್ಮ ಶರೀರದ ಮಾನಸಿಕ ಚಲನೆಯಾಗಿದ್ದು, ಈ ಭಾವನೆ ಅಥವಾ ಕಲ್ಪನೆಯನ್ನು ವಿಶ್ವಪ್ರಜ್ಞೆಯು ಸ್ಥೂಲ ಶರೀರದ ಇಂದ್ರಿಯಾನುಭವದ ಸ್ಥಿತಿಗೆ ತಳ್ಳಿದ ಪರಿಣಾಮ ಕಂಠದಿಂದ ಹೊರಟು ಬಾಯಿಯ ಮೂಲಕ ಬೆಳೆದು ವೈಖರೀಯು ಭಾಷೆಯಾಗಿ ಅರ್ಥವನ್ನು ಪಡೆದುಕೊಳ್ಳುತ್ತದೆ.

## ಮಂತ್ರಶಕ್ತಿ

ಹೀಗೆ ಕಾರಣ ಸ್ಥಿತಿಯಲ್ಲಿ ನಿಶ್ಚಲವಾಗಿರುವ ಮೂಲಾಧಾರದಲ್ಲಿನ ಕುಂಡಲಿನೀ ಅಥವಾ ಪರಾ ಶಬ್ದದಿಂದ ಕಲ್ಪನಾಸ್ಥಿತಿಯ ಪಶ್ಯಂತೀ ಕಡೆಗೆ ಮೊದಲ ಚಲನೆ ಉಂಟಾಗುವುದು. ಈ ರೀತಿಯಲ್ಲಿ ಆಂತರ್ಯದಲ್ಲಿ ಅಡಗಿರುವ ಕಾರಣ ಹಾಗೂ ಸೂಕ್ಷ್ಮ ವಾಕ್ಕು ಮನಸ್ಸಿನ ಚಲನೆಯಿಂದ ಮಧ್ಯಮಾ ಆಗಿ ಮುಂದುವರಿದು, ಆಡುಭಾಷೆ ವೈಖರೀ ಆಗಿ ಹೊರಬರುತ್ತದೆ. ಕಲ್ಪನೆ ಅಥವಾ ವಿಚಾರವಾಗಿ ಅಂತಸ್ಥವಾಗಿದ್ದ ಒಳದನಿಯೇ ಉಚ್ಚಾರಿತ ಆಡುಮಾತಾಗಿ ವ್ಯಕ್ತವಾಗುತ್ತದೆ. ಪ್ರಜ್ಞೆಯ ಕಾರ್ಯವಾಗಿ, ಕಲ್ಪಕ ಶಕ್ತಿ ಅಥವಾ ವಿಚಾರ ಲಹರಿಯ ಪ್ರಕಟಿತ ಸ್ಥೂಲ ರೂಪ ಉಚ್ಚಾರಿತ ಪದ. ಹೀಗಾಗಿ, ಒಂದು ಪದವನ್ನು ಉಚ್ಚರಿಸುವುದೆಂದರೆ ಆ ಪದದ ಪ್ರಜ್ಞಾಶಕ್ತಿಯು ಕ್ರಿಯಾಶೀಲಗೊಳ್ಳುವಂತೆ ಪ್ರಚೋದಿಸುವುದೇ. ಶಬ್ದ ರೂಪವಾದ ಶಕ್ತಿಯೇ ಮಂತ್ರ. ವರ್ಣಾತ್ಮಕ ಶಬ್ದಗಳಲ್ಲಿನ ಅಕ್ಷರಗಳ ಒಳಗೆ ಸೂಕ್ಷ್ಮ ಶಬ್ದರೂಪಗಳಿದ್ದು, ಇವು ನಾವು ಸ್ಥೂಲವಾಗಿ ತಿಳಿದಿರುವ ವರ್ಣಮಾಲೆಯ ಅಕ್ಷರಗಳಲ್ಲ. ಇವು ಸೂಕ್ಷ್ಮ ಹಾಗೂ ಕಾರಣ ರೂಪಗಳಾಗಿದ್ದು, ಇವನ್ನು ಮಾತೃಕಾ ಎಂದು ಕರೆಯುವರು. ಉಚ್ಚಾರಿತ ಶಬ್ದ ಹಾಗೂ ಸ್ಥೂಲವಸ್ತುವಾದ ಅರ್ಥಗಳು ಸೂಕ್ಷ್ಮ ಶಬ್ದ ಅರ್ಥಗಳಿಗೆ ಸಂವಾದಿಗಳಾಗಿರುವಂತೆ, ಕಂಠದಿಂದ ಹೊರಬರುವ ಅಕ್ಷರಗಳು ಆ ಮಾತೃಕಾ ವರ್ಣಗಳ ಸ್ಥೂಲ ಸಂವಾದಿ ರೂಪಗಳು.

ಸೃಷ್ಟಿಗೆ ಪೂರ್ವಭಾವಿಯಾಗಿರುವ ಸಂಕಲ್ಪ ಶಕ್ತಿ ಪರಾ. ಮುಂದೆ ಜಗತ್ತನ್ನು ವ್ಯಕ್ತಗೊಳಿಸಲು ಸನ್ನದ್ಧವಾಗುವ ಇಚ್ಛಾಶಕ್ತಿ ಪಶ್ಯಂತೀ. ನಂತರದ ಕಾರ್ಯಕ್ಕೆ ಮಾತೃಕಾರೂಪವಾಗಿ, ಮೊದಲ ನಿರ್ದಿಷ್ಟ ಚಲನೆಯಾದ ಜ್ಞಾನಶಕ್ತಿ ಮಧ್ಯಮಾ. ಕೊನೆಯ ಕಾರ್ಯವಾಗಿ ಸ್ಥೂಲ ಅಕ್ಷರಗಳು, ಸ್ಥೂಲ ವಸ್ತುಗಳು ಹೊರಬರುವ ಸ್ಥಿತಿಯ ಕ್ರಿಯಾಶಕ್ತಿ ವೈಖರೀ.

ಉಚ್ಚಾರಣೆಯು ದೈವಿಕ ಧ್ವನಿ-ಶಕ್ತಿಯ ಕೊನೆಯ ಮತ್ತು ಸ್ಥೂಲವಾದ ಅಭಿವ್ಯಕ್ತಿಯಾಗಿದೆ. ಧ್ವನಿ-ಶಕ್ತಿಯ ಅತ್ಯುನ್ನತ ಅಭಿವ್ಯಕ್ತಿ, ಮೂಲ ಧ್ವನಿ, ದೈವಿಕ ಧ್ವನಿ **ಪರಾ.** ಪರಾ ಧ್ವನಿಯು

ಮೂಲ-ಕಲ್ಪನೆಗಳು ಅಥವಾ ಸೂಕ್ಷ್ಮ-ಚಿಂತನೆಗಳಾಗುತ್ತದೆ. ಇದು ಧ್ವನಿಯ ಮೊದಲ ಅಭಿವ್ಯಕ್ತಿಯಾಗಿದೆ. ಪರಾದಲ್ಲಿ ಶಬ್ದವು ವ್ಯತ್ಯಾಸವಿಲ್ಲದ ರೂಪದಲ್ಲಿ ಉಳಿಯುತ್ತದೆ.

ಪರಾ, ಪಶ್ಯಂತೀ, ಮಧ್ಯಮಾ ಮತ್ತು ವೈಖರೀ ಧ್ವನಿಯ ವಿವಿಧ ಹಂತಗಳು. ಮಧ್ಯಮಾವು ಧ್ವನಿಯ ಮಧ್ಯಂತರ ಅವ್ಯಕ್ತ ಸ್ಥಿತಿಯಾಗಿದೆ. ಇದರ ಆಸನ ಹೃದಯ. ಪಶ್ಯಂತೀಯ ಸ್ಥಾನವು ನಾಭಿ ಅಥವಾ ಮಣಿಪೂರ ಚಕ್ರವಾಗಿದೆ. ಸೂಕ್ಷ್ಮವಾದ ಆಂತರಿಕ ದೃಷ್ಟಿಯನ್ನು ಹೊಂದಿರುವ ಯೋಗಿಗಳು ಬಣ್ಣ ಮತ್ತು ರೂಪ ವನ್ನು ಹೊಂದಿರುವ ಪದದ ಪಶ್ಯಂತೀ ಸ್ಥಿತಿಯನ್ನು ಅನುಭವಿಸ ಬಹುದು. ಇದು ಎಲ್ಲಾ ಭಾಷೆಗಳಿಗೆ ಸಾಮಾನ್ಯವಾಗಿದೆ ಮತ್ತು ಧ್ವನಿಯ ಸ್ಪಂದಿಸುವ ಏಕರೂಪತೆಯನ್ನು ಹೊಂದಿದೆ. ಭಾರತೀ ಯರು, ವಿವಿಧ ದೇಶೀಯರು, ಪಕ್ಷಿಗಳು, ಮೃಗಗಳು – ಎಲ್ಲರೂ ಧ್ವನಿ ಅಥವಾ ಶಬ್ದದ ಪಶ್ಯಂತೀ ಸ್ಥಿತಿಯಲ್ಲಿ ಒಂದೇ ರೀತಿಯ ಭಾವವನ್ನು ಅನುಭವಿಸುತ್ತಾರೆ. ಸನ್ನೆಯು ಒಂದು ರೀತಿಯ ಮೌನದ ಸೂಕ್ಷ್ಮ ಭಾಷೆಯಾಗಿದೆ. ಇದು ಎಲ್ಲಾ ವ್ಯಕ್ತಿಗಳಿಗೆ ಒಂದೇ ಮತ್ತು ಒಂದೇ ಆಗಿದೆ. ಯಾವುದೇ ದೇಶದ ಯಾವುದೇ ವ್ಯಕ್ತಿ ತನಗೆ ಬಾಯಾರಿಕೆಯಾದಾಗ ನಿರ್ದಿಷ್ಟ ರೀತಿಯಲ್ಲಿ ತನ್ನ ಕೈಯನ್ನು ಬಾಯಿಗೆ ಹಿಡಿದುಕೊಳ್ಳುವ ಮೂಲಕ ಅದೇ ಸೂಚಕವನ್ನು ಮಾಡು ತ್ತಾನೆ. ಕಿವಿಗಳ ಮೂಲಕ ಕೆಲಸ ಮಾಡುವ ಒಂದೇ ಆದ ಅದೇ ಶಕ್ತಿಯು ಶ್ರವಣವಾಗುವುದು, ಕಣ್ಣುಗಳ ಮೂಲಕ ನೋಡುವುದು ಇತ್ಯಾದಿಯಾಗಿ, ಅದೇ ಪಶ್ಯಂತೀಯು ಸಾಕಾರಗೊಂಡಾಗ ಶಬ್ದದ ವಿವಿಧ ರೂಪಗಳನ್ನು ಪಡೆದುಕೊಳ್ಳುತ್ತದೆ. ಭಗವಂತನು ತನ್ನ ಮಾಯೆಯ ಶಕ್ತಿಯ ಮೂಲಕ ಮೊದಲು ನಾಭಿಯಲ್ಲಿ ಮೂಲಾಧಾರ ಚಕ್ರದಲ್ಲಿ ಪರಾ ವಾಣಿಯಾಗಿ, ನಂತರ ಹೃದಯ ದಲ್ಲಿ ಮಧ್ಯಮಾ ಆಗಿ ಮತ್ತು ಅಂತಿಮವಾಗಿ ಗಂಟಲು ಮತ್ತು ಬಾಯಿಯಲ್ಲಿ ವೈಖರೀಯಾಗಿ ಪ್ರಕಟಗೊಳ್ಳುತ್ತಾನೆ. ಇದು ಅವನ ಧ್ವನಿಯ ದಿವ್ಯ ಮೂಲವಾಗಿದೆ. ಎಲ್ಲಾ ವೈಖರೀಯು ಅವನ ಧ್ವನಿ ಮಾತ್ರ. ಇದು ವಿರಾಟ್ ಪುರುಷನ ಧ್ವನಿ.

### ಬೀಜ ಅಕ್ಷರ

ತಂತ್ರಶಾಸ್ತ್ರದಲ್ಲಿ ದೇಹದ ಶಕ್ತಿಕೇಂದ್ರ ಅಥವಾ ಚಕ್ರಗಳಿಗೆ ವರ್ಣಾಕ್ಷರಗಳನ್ನು ಹಾಗೂ ಬೀಜಾಕ್ಷರಗಳನ್ನು ನಿಗದಿಪಡಿಸಿ, ಆಯಾ ಚಕ್ರದ ತತ್ತ್ವವು ಆಯಾ ಬೀಜಾಕ್ಷರಗಳ ಮೂಲಕ ಪ್ರಕಟ ವಾಗುವುದು ಎಂದು ಹೇಳಿದೆ. ಹೀಗಾಗಿ, ಯಾವುದೇ ವಸ್ತುವಿನ ಬೀಜಮಂತ್ರವು ಅದರ ಪ್ರಾಕೃತ ನಾಮರೂಪವೇ ಆಗಿದ್ದು, ಅದನ್ನು ಸೃಜನಾತ್ಮಕ ಶಕ್ತಿಯೊಡನೆ ಉಚ್ಚರಿಸಿ, ಆ ವಸ್ತುವನ್ನೇ ಅಸ್ತಿತ್ವಕ್ಕೆ ತರಬಹುದಂತೆ. ಉದಾಹರಣೆಗೆ, ಮಣಿಪೂರ ಚಕ್ರ ದಲ್ಲಿನ ಅಗ್ನಿ ಬೀಜಾಕ್ಷರವಾದ **ರಂ.** ವಿವಿಧ ಶಕ್ತಿಗಳಿಂದ ಅಗ್ನಿ ಹೇತುವಾಗಿ ಉತ್ಪತ್ತಿಯಾದ ಸೂಕ್ಷ್ಮಶಬ್ದದ ಅಭಿವ್ಯಕ್ತ ವೈಖರೀ ಶಬ್ದವೇ ರಂ. (ಇದೇ ರೀತಿಯಾಗಿ ಮೂಲಾಧಾರ ಚಕ್ರದ ಪೃಥ್ವೀ ತತ್ತ್ವದ ಬೀಜಾಕ್ಷರ **ಲಂ**; ಸ್ವಾಧಿಷ್ಠಾನದ ವರುಣ ಬೀಜಾಕ್ಷರ **ವಂ**; ಅನಾಹತದ ವಾಯು ಬೀಜಾಕ್ಷರ **ಯಂ**; ವಿಶುದ್ಧದ ಆಕಾಶ ಬೀಜಾಕ್ಷರ **ಹಂ**; ಆಜ್ಞಾ ಚಕ್ರದ ಪ್ರಕೃತಿ ಬೀಜಾಕ್ಷರ **ಓಂ**) ಇದಲ್ಲದೆ ಈ ಚಕ್ರಗಳು ಕಮಲ ರೂಪವಾಗಿದ್ದು, ದಳಗಳಿಗೂ ಬೀಜಾಕ್ಷರಗಳುಂಟು. ಕೊನೆಯ ಸಹಸ್ರಾರ ಚಕ್ರದ ಕಮಲದಲ್ಲಿ ಸಹಸ್ರ ದಳಗಳಿದ್ದು, ವರ್ಣಮಾಲೆಯ ಎಲ್ಲ ಅಕ್ಷರಗಳೂ ಇಪ್ಪತ್ತು ಸುತ್ತು ಇರುತ್ತವೆ. ಒಟ್ಟಿನಲ್ಲಿ ಅಕ್ಷರಗಳು ಮತ್ತು ಭಾಷೆಯನ್ನು ಭಾರತೀಯರು ದೈವಿಕವಾದದ್ದು ಎಂದು ತಿಳಿಯುತ್ತಾರೆ.

ಪ್ರಾಣಿಗಳಿಗೆ ಇಲ್ಲದ ಸೌಕರ್ಯವಾದ ಭಾಷೆ ಮಾನವ ಬೆಳೆಸಿಕೊಂಡದ್ದು. ಅಭಿಪ್ರಾಯ ಹಾಗೂ ಭಾಷೆ ಬೇರೆಯೆ. ವೈಖರೀಯಲ್ಲಿ ವ್ಯಕ್ತವಾಗುವುದು ಅಭಿಪ್ರಾಯ. ಅಭಿಪ್ರಾಯ ಪೂರ್ಣ ಸಂವಹನವಾಗುವ ಭಾಷೆ ಸರಸ್ವತಿ. ಅರ್ಥ ಹಿಂದಕ್ಕೆ ಉಳಿದ ಅಶುದ್ಧ ಭಾಷೆಯ ಬಳಕೆ ಪ್ರೀತಿಯನ್ನು, ಸಂತೋಷ ವನ್ನು ಹುಟ್ಟಿಸದು. ಅರ್ಥಪೂರ್ಣವಾಗಿದ್ದು ಸುಖವಾಗಿ ಹರಿದು ಬರುವ ಮಾತು **ನಿಶ್ಶೇಷ ಜಾಡ್ಯಾಪಹಾ** ಎಂದು ವರ್ಣಿಸಲ್ಪಟ್ಟ ಸರಸ್ವತಿ. ನಿಖರತೆ ಇದರ ಗುಣ. ಕತ್ತಲಲ್ಲಿ ದಾರಿ ನಡೆಯಲು ನೆರ ವಾಗುವುದು ಮಾತು ಎಂದು ಉಪನಿಷತ್ತು ಹೇಳುತ್ತದೆ. ಅಂತಹ ಭಾಷಾಪ್ರಯೋಗವನ್ನು ವೇದದಲ್ಲಿ ಅಗ್ನಿ ಎಂದಿದೆ. ಅದು ಮಾಲಿನ್ಯದಿಂದ ನಮ್ಮನ್ನು ಶುಚಿಯಾಗುವಂತೆ ಮಾಡುತ್ತದೆ. ಆದ್ದರಿಂದ ಮಾತನ್ನು ಶಬ್ದತೀರ್ಥ ಎಂದು ಹೇಳುತ್ತಾರೆ. ಇದ ರಿಂದ ಕಂಠದಲ್ಲಿ ಇರುವ 'ವಿಶುದ್ಧ' ಚಕ್ರ ಜಾಗೃತವಾಗುತ್ತದೆ.

ಮಾತು ಸಂಪರ್ಕ ಸಾಧನ, ಆತ್ಮನ ರಾಯಭಾರಿ; ವಾಕ್ ಶಕ್ತಿಯು ಆತ್ಮನಾಡಿಯನ್ನು ಜಾಗೃತಗೊಳಿಸುವಂತಿರಬೇಕು. ಸ್ವಾಮಿ ವಿವೇಕಾನಂದರು 'ಅಮೆರಿಕಾದ ನನ್ನ ಸಹೋದರ ಸಹೋದರಿ ಯರೆ' ಎಂದು ಸಂಬೋಧಿಸಿದಾಗ ಹೀಗಾಯಿತು. ವೈದಿಕ ಸಾಹಿತ್ಯದ ಲಕ್ಷಣವೇ ಈ ಜಾಗೃತಿ, ಅದಕ್ಕೇ ಅದು ಮಂತ್ರ. ಇದು ಭಾಷಾಂತರದಲ್ಲಿ ಬಾರದು. ಭಾಷಾಂತರದಲ್ಲಿ ಓದಿಕೊಂಡ ಬುದ್ಧಿಜೀವಿಗಳಿಗೆ ಈ ಎಚ್ಚರ ಬರುವುದಾದರೂ ಹೇಗೆ?

ಈಗ ನಾವು ನೋಡುತ್ತಿರುವಂತೆ ಪರಿಸರದಂತೆಯೇ ಭಾಷೆ ಯೂ ಮಾಲಿನ್ಯದಿಂದ ಕೂಡಿದೆ. ಪ್ರಜ್ಞೆಯನ್ನು ಬೆಳೆಸಬೇಕಾದ ಭಾಷೆಯು ಅಪಾರ್ಥ, ಮನಸ್ಸಿನ ತುಮುಲಕ್ಕೆ ಕಾರಣವಾಗಿ, ಸಮಸ್ಯೆಗಳನ್ನು ಉಂಟುಮಾಡುತ್ತಿದೆ. ಸಂತೋಷಕ್ಕೆ ದಾರಿಮಾಡಿ ಕೊಡಬೇಕಾದ ಸಂವಾದ ಅಹಂಕಾರಗಳ ತಾಕಲಾಟಕ್ಕೆ ಎಡೆಮಾಡಿ ಕೊಡುತ್ತಿದೆ. ಎಲಿನಾರ್ ರೂಸ್‌ವೆಲ್ಟ್ ಹೇಳಿಕೆ ಚಿಂತನಾರ್ಹ: ''Great minds discuss ideas, average minds discuss events, and small minds discuss people'' (ಉತ್ತಮರು ವಿಚಾರಗಳನ್ನು ಕುರಿತು, ಸಾಮಾ ನ್ಯರು ಸಂಗತಿಗಳನ್ನು ಕುರಿತು ಚರ್ಚಿಸಿದರೆ, ಸಣ್ಣ ಮನಸ್ಸಿನ ಅಲ್ಪರು ವ್ಯಕ್ತಿಗಳನ್ನು ಕುರಿತು ಚರ್ಚಿಸುತ್ತಾರೆ.) ಕುಲವನ್ನು ನಾಲಗೆ ಎತ್ತಿ ತೋರಿಸುತ್ತದೆ ಎಂಬ ಪಂಪನ ಮಾತು ಈಗಲೂ ಸತ್ಯ. ಮಾನವನ ಪ್ರಗತಿಗೆ ಕಾರಣವಾದ ಭಾಷೆಯು ಈಗ ಯುದ್ಧಗಳಿಗೂ ಕಾರಣವಾಗಿ, ಪ್ರಗತಿಯನ್ನು ಕುಂಠಿತಗೊಳಿಸು ತ್ತಿದೆ.

*(ವಿವಿಧ ಮೂಲಗಳಿಂದ ಸಂಗ್ರಹಿತ)*